**<u>ದಿನಾಂಕ: 19.09.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಆರ್ ವಿ ಡಬ್ಲ್ಯೂ ವಕೀಲರಿಂದಃ</u>**

ನಾನು 1993 ನೇ ಸಾಲಿನಲ್ಲಿ ಹುಟ್ಟಿರುತ್ತೇನೆ. ನಾನು ವ್ಯವಸಾಯ ಮತ್ತು ಬಿಜಿನೆಸ್ ಮಾಡುತ್ತೇನೆ. ಹಾನಗಲ್ ನಲ್ಲಿ ಪೆಪ್ಸಿ ಮತ್ತು ಹ್ಯಾಂಗೋ ಐಸ್ಕ್ರೀಮ್ ಡ್ರಿಸ್ಟಿಬ್ಯುಟರ್ ಕೆಲಸ ಮಾಡುತ್ತೇನೆ. ನಮ್ಮದು ವಾರ್ಷಿಕ ಬೆಳೆ ಜಮೀನು ಇದೆ. ಒಂದು ಎಕರೆ ಜಮೀನು ಇದೆ. ನನ್ನ ವ್ಯಾಪಾರಕ್ಕೆ ಟಿನ್ ನಂಬರ ಇದೆ, ಅದನ್ನು ಹಾಜರುಪಡಿಸಿಲ್ಲ. ಜಿ ಎಸ್ ಟಿ ಕಟ್ಟುತ್ತೇನೆ. ನಾನು ವರ್ಷಕ್ಕೆ 25–30 ಸಾವಿರ ಕಟ್ಟುತ್ತೇನೆ. ಇನಕಮ್ ಟ್ಯಾಕ್ಸ ರಿಟರ್ನ ಮಾಡುತ್ತೇನೆ. ಇನಕಮ್ ಟ್ಯಾಕ್ಸ ಕಟ್ಟಿದ ಬಗ್ಗೆ ನನ್ನ ಬಳಿ ದಾಖಲೆ ಇದೆ. ಅದು ಅಂದಾಜು 25–30 ಸಾವಿರ ಬರುತ್ತದೆ.

ಆರೋಪಿ ಕುಮಾರೇಶ್ವರ ಕಾಲೇಜ್ ನಲ್ಲಿ ಅಟೆಂಡರ್ ಕೆಲಸ ಮಾಡುತ್ತಾರೆ. ನಾವು ಲೋಕಲ್ ಮಾರ್ಕೆಟನಲ್ಲಿ ಕೆಲಸ ಮಾಡುವಾಗ ಆರೋಪಿ ಪರಿಚಯ ಆಗಿರುತ್ತಾರೆ. ಆರೋಪಿ ಉದ್ಯೋಗಸ್ಥ ಇದ್ದು ನಾನು ವ್ಯಾಪಾರಸ್ಥ ಇದ್ದು ನಮ್ಮ ಇಬ್ಬರ ಸಂಪರ್ಕ ಹೇಗೆ ಬೆಳೆಯಿತು ಎಂದರೆ ನಾನು ಅಂಗಡಿಗೆ ಹೋಗಿ ಮಾಲು ಹಾಕುವಾಗ ಆರೋಪಿ ಅಲ್ಲಿ ಸಿಕ್ಕಾಗ ಸಂಪರ್ಕ ಬೆಳೆದಿರುತ್ತದೆ. ಒಂದು ಹಂತದಲ್ಲಿ ನಾವಿಬ್ಬರೂ ಕ್ಲೋಜ್ ಆಗಿ ಇದ್ದೆವು. ನಮ್ಮ ಮನೆಗೆ ಅವರು ಬಂದಿಲ್ಲ ನಾನು ಅವರ ಮನೆಗೆ ಹೋಗುವಷ್ಟು ಕ್ಲೋಸ್ ಆಗಿರಲಿಲ್ಲ.

ಆರೋಪಿ 5 ಲಕ್ಷ ಮೌಲ್ಯದ ಚೆಕ್ ನೀಡಿರುತ್ತಾನೆ. ಮೊದಲಿಗೆ ನಾನು ಹಣ ನೀಡಿದ್ದೇನೆ, ಮರಳಿ ಹಣ ಕೇಳಿದಾಗ ಆರೋಪಿ ಚೆಕ್ ನೀಡಿರುತ್ತಾರೆ. ಈ ಹಣವು ನನ್ನ ವ್ಯಾಪಾರ ಆರ್ಥಿಕ ಸ್ಥಿತಿಗತಿಗೆ ಒಂದು ಮಟ್ಟಕ್ಕೆ ದೊಡ್ಡ ಮೊತ್ತ ಆಗುತ್ತದೆ ಎಂದರೆ ಸರಿ. ಆರೋಪಿ ಹಾನಗಲ್ ದ ತುರಬಂದಿ ಓಣಿಯಲ್ಲಿ ವಾಸವಾಗಿರುತ್ತಾರೆ. ಆರೋಪಿ ನನಗೆ ಅದು ಬಾಡಿಗೆ ಮನೆ ಅಂತಾ ತಿಳಿಸಿದ್ದರು. ಆರೋಪಿ ನನಗೆ 10 ನೇ ತಿಂಗಳಿನಲ್ಲಿ ಚೆಕ್ ನೀಡಿರುತ್ತಾರೆ. ಆರೋಪಿ ಒಂದೂವರೆ ವರ್ಷದಿಂದ ಆ ಓಣಿಯಲ್ಲಿ ವಾಸವಾಗಿಲ್ಲ ಎಂದರೆ ಸಾಕ್ಷಿ ನಾನು ಅವರ ಮನೆಗೆ ಹೋಗಿಲ್ಲ ಅಂತಾ ನುಡಿಯುತ್ತಾರೆ. ಒಂದೂವರೆ ವರ್ಷದಿಂದ ಆರೋಪಿ ಹಾನಗಲ್ ನಲ್ಲಿ ವಾಸವಾಗಿಲ್ಲ ಎಂದರೆ ಸಾಕ್ಷಿ ನಾನು ಕಾಲೇಜಿನಲ್ಲಿ ಭೇಟಿಯಾಗಿರುತ್ತೇನೆ ಅಂತಾ ನುಡಿಯುತ್ತಾರೆ.

ಆರೋಪಿ ಸ್ಟೇಟ್ ಬ್ಯಾಂಕಿನ ಚೆಕ್ ಕೊಟ್ಟಿರುತ್ತಾರೆ. ಹಾನಗಲ್ ನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ 2 ಬ್ರ್ಯಾಂಚುಗಳು ಇವೆ. ಆ ಬ್ರ್ಯಾಂಚ್ ಕಂಚಗಾರ ಓಣಿಯಲ್ಲಿದೆ ಎಂದರೆ ಸರಿ. ಚೆಕ್ ಅಕೌಂಟ್ ಕ್ಲೋಜ ಆಗಿದ್ದಕ್ಕೆ ಮರಳಿ ಬಂದಿರುತ್ತದೆ. ನಿಪಿ–2 ಮೆಮೋದಲ್ಲಿ ಕ್ರಮ ಸಂಖ್ಯೆ

50 ರಲ್ಲಿ ಅಕೌಂಟ್ ಕ್ಲೋಜನ ಗುರುತನ್ನು ನಾನೇ ಮಾಡಿದ್ದೇನೆ ಎಂದರೆ ಸರಿಯಲ್ಲ ಸಾಕ್ಷಿ ಬ್ಯಾಂಕಿನವರೇ ಹಾಕಿರುತ್ತಾರೆ ಅಂತಾ ನುಡಿಯುತ್ತಾರೆ. ನಿಪಿ–2 ರಲ್ಲಿ ಅಕೌಂಟ್ ಕ್ಲೋಜ ಅಂತಾ ಗುರುತು ಮಾಡಿದ್ದಲ್ಲಿ ಬ್ಯಾಂಕಿನವರು ಸಹಿ ಮಾಡಿಲ್ಲ ಎಂದರೆ ಸಾಕ್ಷಿ ಸಹಿ ಮಾಡಿದ್ದಾರೆ ಅಂತಾ ನುಡಿಯುತ್ತಾರೆ. ಸದರಿ ಖಾತೆಯು ಯಾವಾಗ ಕ್ಲೋಜ್ ಆಗಿದೆ ಅಂತಾ ಮಾಹಿತಿ ನೀಡಿರುವುದಿಲ್ಲ. ಆ ವಿಚಾರವನ್ನು ನಾನು ಬ್ಯಾಂಕಿನವರಿಂದ ಕೇಳಿಲ್ಲ.

ನಿಪಿ–1 ರ ಮೇಲಿರುವ ಹಿಂದಿನ ಸಹಿ ನನ್ನದು ಇರುವುದಿಲ್ಲ. ಬ್ಯಾಂಕಿನಿಂದ ಸದರಿ ಖಾತೆ ಯಾವ ದಿನಾಂಕದಂದು ಕ್ಲೊಜ್ ಆಗಿದೆ ಅಂತಾ ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ಹಾನಗಲ್ ದ ಚಿದಂಬರ ನಗರದಲ್ಲಿರುವ ಎಸ್ ಬಿ ಐ ಶಾಖೆಯು ಮೊದಲು ಎಸ್ ಬಿ ಎಂ ಅಂತಾ ಇತ್ತು ಎಂದರೆ ಸರಿ. ಎಸ್ ಬಿ ಎಂ ಖಾತೆಯು 2012 ರಲ್ಲಿ ಪ್ರಾರಂಭವಾಗಿತ್ತು ಎಂದರೆ ಸರಿ. ಎಸ್ ಬಿ ಎಂ ಬ್ಯಾಂಕಿಗೆ ಎಸ್ ಬಿ ಐ ಬ್ಯಾಂಕಿನಿಂದ ಸಾಕಷ್ಟು ವರ್ಗಾವಣೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2017 ರಲ್ಲಿ ಎಸ್ ಬಿ ಎಂ ಬ್ಯಾಂಕ್ ಮತ್ತು ಎಸ್ ಬಿ ಐ ಬ್ಯಾಂಕಿಗೆ ಮರ್ಜ ಆಗಿರುತ್ತದೆ ಎಂದರೆ ಸಾಕ್ಷಿ ಮರ್ಜ ಆದ ವಿಷಯ ಗೊತ್ತಿದೆ ತಾರೀಖು ಗೊತ್ತಿಲ್ಲ ಅಂತಾ ನುಡಿಯುತ್ತಾರೆ.

2012 ನೇ ಇಸ್ವಿಯಿಂದ ಕಂಚಗಾರ ಓಣಿಯಲ್ಲಿ ಎಸ್ ಬಿ ಐ ಬ್ಯಾಂಕಿನಿಂದ ಯಾವುದೇ ವ್ಯವಹಾರ ಮಾಡಿಲ್ಲ ಎಂದರೆ ಸಾಕ್ಷಿ ನನಗೆ ಚೆಕ್ ಮಾತ್ರ ಕೊಟ್ಟಿದ್ದು ಗೊತ್ತು ಅಂತಾ ನುಡಿಯುತ್ತಾರೆ. ಆರೋಪಿಯ ಬ್ಯಾಂಕಿನ ವ್ಯವಹಾರದ ಬಗ್ಗೆ ನಾನು ತಿಳಿದುಕೊಂಡಿಲ್ಲ. 5 ಲಕ್ಷ ಹಣ ನೀಡಿದಾಗ ಆರೋಪಿಯಿಂದ ಭದ್ರತೆಗಾಗಿ ಏನೂ ತೆಗೆದುಕೋಂಡಿಲ್ಲ. ಆರೋಪಿಗೂ ನನಗೂ ಯಾವುದೇ ರೀತಿ ಪರಿಚಯ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾನು ಹಣ ಕೊಟ್ಟಿಲ್ಲ, ಆರೋಪಿ ನನಗೆ ಯಾವುದೇ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ನಾನು ಹಣ ನೀಡಿದ್ದೇನೆ ಅಂತಾ ನುಡಿಯುತ್ತಾರೆ. 2012 ರಲ್ಲಿ ಎಸ್ ಬಿ ಐ ಬ್ಯಾಂಕಿನಿಂದ ಎಸ್ ಬಿ ಎಂ ಬ್ಯಾಂಕಿಗೆ ಖಾತೆಗಳು ವರ್ಗಾವಣೆ ಆದಾಗ ಆರೋಪಿ ಎಸ್ ಬಿ ಐ ಶಾಖೆಗೆ ತನ್ನ ಚೆಕ್ ಬುಕ್ಕನ್ನು Surrender ಮಾಡಿದ್ದಾರೆ ಎಂದರೆ ಅದು ನನಗೆ ಗೊತ್ತಿಲ್ಲ ಅಂತಾ ನುಡಿಯುತ್ತಾರೆ. ಆರೋಪಿ ಹೇಳಿದ ಪ್ರಕಾರ ಆರೋಪಿ ತುರಬಂದಿ ಓಣಿಯವರು ಎಂದು ಹೇಳಿರುತ್ತಾರೆ.

5–6 ವರ್ಷಗಳಿಂದ ಪರಿಚಯ ಇದ್ದ ಕಾರಣ ಮೇಲಿಂದ ಮೇಲೆ ಹಣ ಪಡೆದುಕೊಂಡು ಮತ್ತು ಮರಳಿ ನೀಡಿದ ಕಾರಣ ನಾನು ಮಕ್ಕಳಿಗೆ ಹುಷಾರಿಲ್ಲ ಅಂತಾ ಹೇಳಿದ್ದಕ್ಕೆ ನಾನು ಹಣ ನೀಡಿದ್ದೇನೆ. ಆರೋಪಿಗೆ ಸರಕಾರದಿಂದ ಯಾವ ಇಸ್ವಿಯಿಂದ ಸಂಬಳ ಬರುತ್ತದೆ ಅಂತಾ ನಾನು ವಿಚಾರಿಸಿಲ್ಲ. ಆರೋಪಿಯ ಸಂಬಳ ಯಾವ ಬ್ಯಾಂಕಿಗೆ ಜಮೆ ಆಗುತ್ತದೆ ಅಂತಾ ನಾನು ಕೇಳಿಲ್ಲ. ಆರೋಪಿಯೊಂದಿಗೆ ವೈಯಕ್ತಿಕ ಪರಿಚಯ ಇದ್ದು ವ್ಯವಹಾರ

ಎಂದರೆ ಈ ವ್ಯವಹಾರ ಮಾತ್ರ ಅಂತಾ ನುಡಿಯುತ್ತಾರೆ. 2011-12 ನೇ ಸಾಲಿನಲ್ಲಿ ಆರೋಪಿ ಕುಮಾರ ಬನ್ನೂರ ಬಳಿ 30-40 ಸಾವಿರ ರೂಪಾಯಿ ಸಾಲ ಮಾಡಿದ್ದ ಎಂದರೆ ನನಗೆ ಗೊತ್ತಿಲ್ಲ. ಆ ಕಾಲಕ್ಕೆ ಆರೋಪಿ ಕುಮಾರ ಬನ್ನೂರ ಅವರಿಗೆ ಕಂಚಗಾರ ಓಣಿಯಲ್ಲಿರುವ ಖಾತೆಯ ಎಸ್ ಬಿ ಐ ಖಾತೆಯ ಚೆಕ್ ನ್ನು ನೀಡಿದ್ದರೂ ಎಂದರೆ ಸರಿಯಲ್ಲ. ಕುಮಾರ ಬನ್ನೂರ ಆರೋಪಿಯಿಂದ ಹೆಚ್ಚಿನ ಹಣ ಕೇಳಿದ್ದಕ್ಕೆ ಆರೋಪಿ ಮತ್ತು ಕುಮಾರ ಬನ್ನೂರ ಮಧ್ಯ ಮನಸ್ತಾಪ ಉಂಟಾಗಿತ್ತು ಎಂದರೆ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಆ ಚೆಕ್ ನ್ನು ಕುಮಾರ ಬನ್ನೂರ ನನಗೆ ಕೊಟ್ಟು ನನ್ನ ಮೂಲಕ ಹೆಚ್ಚಿನ ಹಣ ಹಾಕಿ ಈ ಚೆಕ್ ನ್ನು ಬ್ಯಾಂಕಿಗೆ ಹಾಕಿ ಈ ಸುಳ್ಳು ದೂರನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೆ ಫೆಬ್ರುವರಿ 2024 ಒಂದನೇ ವಾರದಲ್ಲಿ ಹಣ ನೀಡಿರುತ್ತೇನೆ. ಫೆಬ್ರುವರಿ 2024 ರಿಂದ ಡಿಸೆಂಬರ್ 2024 ರವರಗೆ ಹೆಚ್ಚಿನ ಹಣ ನೀರಿಕ್ಷೆ ಮಾಡಿದ್ದೀರಾ ಎಂದರೆ ನೀರಿಕ್ಷೆ ಮಾಡಿಲ್ಲ ಸಾಕ್ಷಿ ಆರೋಪಿ ಈ ರೀತಿ ಹಲವಾರು ಮೋಸ ಮಾಡಿದ ವಿಷಯಗಳು ಗೊತ್ತಾದಾಗ ನಾನು ನನ್ನ ಹಣ ಮರಳಿ ಕೇಳಿರುತ್ತೇನೆ. ಬೇರೆ ಯಾರು ಯಾರಿಗೆ ಮೋಸ ಮಾಡಿದ್ದಾರೆ ಅಂತಾ ಗೊತ್ತಾಗಿದೆ ಆದರೆ ಅವರ ಹೆಸರು ಹೇಳಲು ಬರುವುದಿಲ್ಲ. ಆರೋಪಿ ಯಾವುದೇ ಮೋಸ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಕುಮಾರ ಬನ್ನೂರ ಸೇರಿ ಆರೋಪಿಗೆ ಮೋಸ ಮಾಡಿದ್ದೇವೆ ಎಂದರೆ ಸರಿಯಲ್ಲ. ಬ್ಯಾಂಕಿನವರು ಮೆಮೋದಲ್ಲಿ ಸಂಪೂರ್ಣ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ.

ಕುಮಾರ ಬನ್ನೂರ ಗೆ ನೀಡಿದ ಚೆಕ್ ನ್ನು ನಾನು ದುರುಪಯೋಗಪಡಿಸಿಕೊಂಡು ಸುಳ್ಳು ಕೇಸು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. 2-3 ತಿಂಗಳ ಹಿಂದೆ ಕುಮಾರ ಬನ್ನೂರ ಮತ್ತು ಆರೋಪಿ ಮಧ್ಯ ಗಲಾಟೆ ಆಗಿ ಠಾಣೆಯಲ್ಲಿ ದೂರು ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ ಈ ಎಲ್ಲಾ ವಿಷಯ ನನಗೆ ಗೂತ್ತಿದ್ದರೂ ಸಹ ಗೊತ್ತಿಲ್ಲ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ತುರಮಂದಿ ಓಣಿಯಲ್ಲಿ ಚಂದ್ರಶೇಖರ ಪಾಟೀಲ ಎನ್ನುವವರ ಮನೆಯಲ್ಲಿ ಬಾಡಿಗೆ ಎಂದರೆ ನನಗೆ ಗೊತ್ತಿಲ್ಲ. 2024 ಪ್ರಾರಂಭದಲ್ಲಿ ಆರೋಪಿ ಮನೆ ಖಾಲಿ ಮಾಡಿ ಸ್ವಂತ ಊರಾದ ಮಲಗುಂದದಲ್ಲಿ ವಾಸವಾಗಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ನೋಟಿಸು ತಲುಪಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ರಿಜೆಕ್ಟ ಮಾಡಿದ್ದಾರೆ ಅಂತಾ ನುಡಿಯುತ್ತಾರೆ. ನಾನು ಪೋಸ್ಟ ಅಥಾರಿಟಿಯೊಂದಿಗೆ ಮೀಲಾಪಿಯಾಗಿ ಆ ರೀತಿ ಸುಳ್ಳು ವರದಿ ಹಾಕಿದ್ದೇವೆ ಎಂದರೆ ಸರಿಯಲ್ಲ. ಆರೋಪಿ

ತುರಮಂದಿ ಓಣಿಯಲ್ಲಿ ವಾಸವಾಗದೇ ಇದ್ದ ಕಾರಣಕ್ಕೆ ನೋಟಿಸು ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಅಕೌಂಟ ನಂಬರ ಹೇಳಲು ಬರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ

ಮತ್ತು ಜೆ.ಎಂ.ಎಫ್.ಸಿ, ಹಾನಗಲ್

**ಹೆಚ್ಚುವರಿ  ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ  ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ./20**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | | ಡಿಡಬ್ಲ್ಯೂ | |
| ತಂದೆ:ಗಂಡನ ಹೆಸರು | : | | | |
| ವಯಸ್ಸು | : | ವರ್ಷ | | |
| ಉದ್ಯೋಗ | : | | | |
| ವಾಸ ಸ್ಥಳ | : | | | |

**ದಿನಾಂಕ:05.11.2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ.  ವಕೀಲರಿಂದಃ**

.

**ಪಾಟೀ ಸವಾಲುಃ ಪಿರ್ಯಾದಿದಾರರ ಪರ ಶ್ರೀ. ವಕೀಲರಿಂದಃ**

.

**(ಪಿರ್ಯಾದಿದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ